ಆದಾಯ ಬರುತ್ತದೆ ಎಂದು ಅಸೆಸ್ ಮಾಡಲಿಕ್ಕೆ ಸಾಧ್ಯವಿಲ್ಲ. ಲೋಪದೋಷಗಳನ್ನು ಸರಿಪಡಿಸಲಿಕ್ಕೆ ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನೂ ತೆಗೆದುಕೊಳ್ಳುತ್ತಿದೆ ಎಂದು ತಿಳಿಸಬಯಸುತ್ತೇನೆ.

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ.

283 - ಶ್ರೀ ಎಸ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಬಗ್ಗೆ ವಲಯ11ರ ವಿತರಣಾ ವ್ಯವಸ್ಥೆಯನ್ನು ಯಾವಾಗ ಮಾಡಿ ಮುಗಿಸಲಾಗುವುದು. ಹಾಗೂ ಕದ್ರಿ ಪಂಪಿಂಗ್ ಸ್ಟೇಷನ್ ಮತ್ತು ಬೆಂದೂರು ಶುದ್ಧೀಕರಣ ಘಟಕದಲ್ಲಿ ಪಂಪ್ ಹೌಸಿಗೆ ವಿದ್ಯುತ್ ಜೋಡಣೆ ವ್ಯವಸ್ಥೆಯನ್ನು ಯಾವಾಗ ಮಾಡಲಾಗುವುದು.

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಬಂದಿದೆ.

2) ವಲಯ 11ರ ವ್ಯವಸ್ಥೆಯನ್ನು ಮಾರ್ಚ್ 98ರ ಅಂತ್ಯದೊಳಗೆ ಮುಗಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಕದ್ರಿ ಪಂಪಿಂಗ್ ಸ್ಟೇಷನ್‌ನಲ್ಲಿ ಒಂದು ಹೆಚ್ಚುವರಿ 50 ಹೆಚ್.ಪಿ. ಅಶ್ವಶಕ್ತಿಯ ನೀರಿನ ಪಂಪ್‌ನ್ನು ಅಳವಡಿಸಲಾಗಿರುತ್ತದೆ. ಸದ್ರಿ ಪಂಪುಗಳಿಗೆ ವಿದ್ಯುತ್ ಸಂಪರ್ಕಿಸಲು ಮಹಾನಗರಪಾಲಿಕೆಯಿಂದ ಸಬ್‌ಸ್ಟೇಷನ್ ನಿರ್ಮಿಸುವ ಕ್ರಮವನ್ನು ಕೈಗೊಂಡಿದ್ದು, ಸದ್ಯದಲ್ಲೇ ವಿದ್ಯುತ್ ಸಂಪರ್ಕ ಕಲ್ಪಿಸಿ ಪಂಪುಗಳನ್ನು ಚಾಲನೆಗೊಳಿಸಲಾಗುವುದು ಹಾಗೂ ಬೆಂದೂರು ಪಂಪು ಹೌಸಿಗೆ ವಿದ್ಯುತ್‌ಚ್ಛಕ್ತಿ ಮಂಜೂರಾತಿ ದೊರೆತ ನಂತರ ಚಾಲ್ತಿಗೊಳಿಸಲಾಗುವುದು.

ಶ್ರೀ ಎಸ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿ ಉದ್ಭವವಾಗಿದೆ. ಹತ್ತಿರದಲ್ಲೇ ಇರುವ ನದಿ ತಂಬಿ ತುಳುಕಿ ಹರಿಯುತ್ತಿದೆ. ಇನ್ನೊಂದು ಕಡೆ ಧಾರಾಕಾರವಾದ ಮಳೆ ಬರುತ್ತಿದೆ. ಆದರೆ ಅನೇಕ ಡಿವಿಜನ್‌ಗಳಲ್ಲಿ ಮನೆಗಳಲ್ಲಿ ನಲ್ಲಿ ನೀರನ ಕೊಳಾಯಿಯನ್ನು ತಿರುಗಿಸಿದಲ್ಲಿ ಒಂದೇ ಒಂದು ಹನಿ ನೀರೂ ಕೂಡ ಬರುತ್ತಿಲ್ಲ. ವಾರಗಟ್ಟಲೆ ನೀರಿಲ್ಲದಂತಾಗಿದೆ. ವಿತರಣಾ ವ್ಯವಸ್ಥೆ ಸಮರ್ಪಕವಾಗಿ ಆಗದಿರುವುದರಿಂದ ಈ ರೀತಿ ಆಗುತ್ತಿದೆ. ಕಳೆದ ಹಲವು ವರ್ಷಗಳಿಂದ ನಾವು ಇದರ ಬಗ್ಗೆ ಪದೇ ಪದೇ ಒತ್ತಾಯ ಮಾಡುತ್ತಿದ್ದೇವೆ. ಆದರೂ ಕೂಡ ಎಷ್ಟು ಕ್ಷಿಪ್ರಗತಿಯಲ್ಲಿ ಅದನ್ನು ನಿವಾರಣೆ ಮಾಡಬೇಕೋ ಆ ರೀತಿ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯುವುದೇನೆಂದರೆ, ಜೋನ್ 11ರ ಬಗ್ಗೆ ತಾವೇನು ಹೇಳಿದ್ದೀರಿ, ಅದರ ಬಗ್ಗೆ ನಾವು ಒಂಭತ್ತು ತಿಂಗಳಿನಿಂದಲೂ ಕೇಳುತ್ತಿದ್ದೆವು. ಸುಮಾರು 15 ಡಿವಿಜನ್‌ಗಳಿಗೆ ಇವತ್ತು ನೀರು ಸರಬರಾಜು ಆಗಿ ಕನಿಷ್ಠ ದಿವಸಕ್ಕೆ 1-2 ಗಂಟೆಗಳಾದರೂ ನೀರು

ಬರಬೇಕು. ಜೋನ್ 11 ಅನ್ನು ಮುಗಿಸಲು ತಾವು 9 ತಿಂಗಳ ಕಾಲಾವಕಾಶ ಕೇಳಿದ್ದೀರಿ, ತಾವು ಅದನ್ನು 3 ತಿಂಗಳಲ್ಲಿ ಮುಗಿಸಿ ಕೊಡುವಂತೆ ಆದೇಶ ನೀಡಬೇಕು ಅಧ್ಯಕ್ಷರೇ, ಮಾನ್ಯ ಸಚಿವರಿಗೆ ಇದರ ಬಗ್ಗೆ ಆದೇಶ ನೀಡಬೇಕೆಂದು ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ಎರಡು ವರ್ಷಗಳಿಂದ ಪಂಪ್‌ಹೌಸ್‌ನ ಮಂಜೂರಾತಿಯೂ ಪಂಪಿಂಗ್‌ನಲ್ಲಿ ಇದೆ. ವಿಶೇಷವಾಗಿ ಬೈಂದೂರ್ ಪಂಪ್ ಹೌಸ್‌ನ ವಿದ್ಯುತ್ ಜೋಡಣೆ ನೇರವಾಗಿ ಇಲ್ಲದೇ ಇರುವುದರಿಂದ ಅನೇಕ ಹಳ್ಳಿಗಳಿಗೆ ನೀರಿನ ಕೊರತೆ ಉಂಟಾಗಿದೆ. ಆದುದರಿಂದ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರತಕ್ಕಂಥದ್ದು ಮತ್ತು ಪಂಪ್‌ಹೌಸ್‌ನ ವಿದ್ಯುತ್ ಜೋಡಣೆಯನ್ನು ಸರಿಯಾಗಿ ಮಾಡಬೇಕು. ಮತ್ತು ಜೋನ್ 11 ಅನ್ನು ಮೂರು ತಿಂಗಳಲ್ಲಿ ಆಗುವಂತೆ ತಾವು ಆದೇಶ ನೀಡ ಬೇಕು. ಅದೇ ರೀತಿ ವಲಯ 5 ರದ್ದೂ ಕೂಡ ತಕ್ಷಣ 1-2 ತಿಂಗಳಲ್ಲಿ ಆಗುವಂತೆ ತಾವು ಆದೇಶ ಕೊಡಬೇಕು. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ತಮ್ಮಿಂದ ಬಯಸುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಂಗಳೂರು ನಗರಸಭೆ ಈಗ ಮೇಗಾಸಿಟಿಯಾಗಿದೆ. ಅದಕ್ಕೆ ತುಂಗಾನದಿ ಮೂಲದಿಂದ ನಾವು ನೀರನ್ನು ಒದಗಿಸುತ್ತೇವೆ. ಇಲ್ಲಿ 18 ಎಂಜಿಡಿ ನೀರು ಇದೆ. ಒಂದು ವೆಂಟೆಂಡ್ ಡ್ಯಾಮ್ ಕಟ್ಟಿ ಅದರ ಮೂಲಕ ನೀರು ಕೊಡುತ್ತಿದ್ದೇವೆ. ಕಾರ್ಪೊರೇಷನ್‌ಗೆ 10 ಎಂಜಿಡಿ ಅಷ್ಟು ನೀರನ್ನು ಕೊಡುತ್ತಿದ್ದೇವೆ. ಮಾನ್ಯ ಯೋಗೇಶ್‌ಭಟ್ ಅವರ ಕ್ಷೇತ್ರದಲ್ಲಿ ಒಟ್ಟು ಅವರು 5ನೇ ವಲಯವನ್ನು ಮಾಡಿ ಕೊಡಿ ಎಂದು ಕಳೆದ ಸಲ ಪ್ರಶ್ನೆ ಹಾಕಿದ್ದರು ಈಗಾಗಲೇ ನಾವು 11ನೇ ವಲಯ ಭಾಗದಲ್ಲಿ ಬರತಕ್ಕ ಬಡಾವಣೆಗಳಿಗೆ ನೀರು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇವತ್ತು 11ನೇ ವಲಯದಲ್ಲಿ ಹಾಲಿ ವಿತರಣಾ ವ್ಯವಸ್ಥೆ ತುಂಬಾ ಹಳೆಯದಾಗಿದೆ ಇನ್ನು ಮಾರ್ಡನೈಸೇಶನ್ ಮಾಡಲಿಕ್ಕೆ ಸುಮಾರು 15 ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ಅದರಲ್ಲಿ ಏಳೂವರೆ ಕೋಟಿಯನ್ನು ಈಗಾಗಲೇ ಖರ್ಚು ಮಾಡಿ 600 ಮಿ.ಮಿ. ಹಾಗೂ 400 ಮಿ.ಮಿ. ವ್ಯಾಸದ ಕೊಳವೆ ಮಾರ್ಗಗಳನ್ನು ಹಾಕತಕ್ಕಂಥದ್ದು, ಇವೆ, ಅವನ್ನೆಲ್ಲಾ ರೀಮಾಡೆಲಿಂಗ್ ಮಾಡಿದ್ದೇವೆ. ಒಂದು Express feeder line ಎಂದು ಹೇಳಿ ಪವರ ಸರಬರಾಜಿಗಾಗಿ 25 ಲಕ್ಷ ರೂ. ಗಳನ್ನು ಕಾರ್ಪೊರೇಷನ್‌ಗೆ ಹಣ ತುಂಬಿ ಅದನ್ನು ಮಾಡಿಕೊಟ್ಟಿದ್ದೇವೆ. ಕದ್ರಿ ಪಂಪಿಂಗ್ ಸ್ಟೇಷನ್ ಈಗಾಗಲೇ ಹೆಚ್ಚುವರಿ 50 ಹೆಚ್.ಪಿ.ಶಕ್ತಿಯ ನೀರಿನ ಪಂಪನ್ನು ಅಳವಡಿಸಲಾಗಿದೆ. ಅದಕ್ಕೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿ ತಾವು ತಿಳಿಸಿರುವ ಹಾಗೆ ಒಂದು ತಿಂಗಳಲ್ಲಿ ಚಾಲೂ ಕೊಡುವುದಕ್ಕೆ ಆಗುತ್ತದೆ. ತಾವು ತಿಳಿಸಿರುವ ಹಾಗೆ 11ರ ವಲಯ ಜಯರಾಮಶೆಟ್ಟಿಯವರಿಗೆ ಬರುತ್ತದೆ, 5ನೇ ವಲಯ ನಿಮಗೆ ಬರುತ್ತದೆ. ಅಲ್ಲಿ ಏಳೂರರೆ ಕೋಟಿಯಷ್ಟು ಕೆಲಸ ಬಾಕಿ ಉಳಿದಿದೆ. ಅದನ್ನು ಮೂರು ತಿಂಗಳಲ್ಲಿ ಮಾಡಿ ಅದನ್ನು ಮೂರು ತಿಂಗಳಲ್ಲಿ ಮಾಡಿ ಕೊಡಿ ಎಂದು ಹೇಳಿದ್ದಾರೆ. ಆದರೆ ಮೂರು ತಿಂಗಳಲ್ಲಿ ಮಾಡಿ ಕೊಡುವುದಕ್ಕೆ ಆಗುವುದಿಲ್ಲ. 9 ತಿಂಗಳು ಬೇಕಾಗುತ್ತದೆ. ಸಂಪೂರ್ಣ ಮುಂದಿನ ಬೇಸಿಗೆ ಹೊತ್ತಿಗೆ ಪೂರ್ತಿ ಮಾಡಿಕೊಡುತ್ತೇವೆ.

ಶ್ರೀ ಕೆ. ಜಯರಾಮ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ವಲಯ 11ರಲ್ಲಿ ನನ್ನ ಕ್ಷೇತ್ರದ ಹತ್ತು ಡಿವಿಷನ್‌ಗಳು ಬರುತ್ತದೆ. ಅದು ಬಹಳ ಎತ್ತರದ ಪ್ರದೇಶವಾದ್ದರಿಂದ ಒಂದು ಗಂಟೆ ಕರೆಂಟ್ ಇಲ್ಲದಿದ್ದರೆ ನಾಲ್ಕು ದಿವಸ ಅಲ್ಲಿ ನೀರು ಬರುವುದಿಲ್ಲ. ಈಗಾಗಲೇ ಶ್ರೀ ಯೋಗೇಶ್ ಭಟ್‌ರವರಿಗೆ ಕೊಟ್ಟ ಉತ್ತರದಲ್ಲಿ ಇನ್ನು ಒಂಭತ್ತು ತಿಂಗಳಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ. ನನಗೆ ಕೊಟ್ಟ ಉತ್ತರದಲ್ಲಿ ಆದಷ್ಟು ಕ್ಷೀಪ್ರವಾಗಿ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಅದುದರಿಂದ ಇದಕ್ಕಾಗಿ ಎಷ್ಟು ಹಣ ನಿಗದಿ ಮಾಡದ್ದೀರಿ, ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ. ನನಗೆ ಗೊತ್ತಿರುವ ಹಾಗೆ ಕಳೆದ ಒಂದೂವರೆ ವರ್ಷದಿಂದ ಈ ಸಮಸ್ಯೆ ಇದೆ. ಎಂಆರ್‌ಪಿಎಲ್‌ರವರು ಮಂಗಳೂರು ಕಾರ್ಪೊರೇಶನ್‌ಗೆ ಕೊಡತಕ್ಕ ಹಣ ಬಹಳಷ್ಟು ಬಾಕಿ ಇರುವುದರಿಂದ ಅದನ್ನು ವಸೂಲಿ ಮಾಡಿ, ನಿಮ್ಮಲ್ಲಿಯೂ ಹಣ ಬಿಡುಗಡೆ ಮಾಡದೆ ಈ ತೊಂದರೆ ಆಗಿದೆ. ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ನಿರ್ದಿಷ್ಟವಾದ ಉತ್ತರ ನೀಡಬೇಕು. ಎಷ್ಟು ಹಣವನ್ನು ಮುಂಗಡ ಪತ್ರದಲ್ಲಿ ಸೇರಿಸಿದ್ದೀರಿ, ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಇದು ಮಾರ್ಚ್ ತಿಂಗಳೊಳಗೆ ಆಗುತ್ತದೆಯೇ ಇದರ ಬಗ್ಗೆ ನಿರ್ದಿಷ್ಟ ಉತ್ತರ ಕೊಡಿ.

ಶ್ರೀ ಬಿ. ಎನ್. ಬಚ್ಚೇಗೌಡ : ಇನ್ನು ಆರೂವರೆ, ಏಳು ಕೋಟಿಯಷ್ಟು ಹಣ ಇದೆ. ಟೋಟಲ್ ರಿಮಾಡಲಿಂಗ್ ಆಫ್ ಮಂಗಳೂರು ಸಿಟಿ ಮಾಡಲಿಕ್ಕೆ 12, ಹಾಗೂ 5 ವಲಯಗಳಲ್ಲಿ Ground level Resorvoirs (GLRs) ಒವರ್ ಹೆಡ್ ಟ್ಯಾಂಕ್ ಮತ್ತು ವಿತರಣಾ ಜಾಲ ಇದಕ್ಕೆಲ್ಲಾ ಬಡ್ಜೆಟ್ ಯೋಜನೆಯಲ್ಲಿ ಇಟ್ಟಿರತಕ್ಕಂಥದ್ದು 14.5 ಕೋಟಿ ರೂ.ಗಳು ಇದರಲ್ಲಿ 5 ಜೋನ್‌ಅನ್ನು ಟ್ಯಾಕಲ್ ಮಾಡಿದ್ದೇವೆ. ಅದರಲ್ಲಿ 50 ಪರ್ಸೆಂಟ್ ಕೆಲಸ ಮಂಗಳೂರಿನಲ್ಲಿ ಮುಗಿಯುತ್ತಾ ಬಂದಿದೆ ಇನ್ನು ಉಳಿದ 50 ಪರ್ಸೆಂಟ್ ಕೆಲಸ ಏಳೂವರೆ ಕೋಟಿಯ ಹಣದಲ್ಲಿ ಆಗಬೇಕು. ಆ ಹಣದಲ್ಲಿ ಮುಗಿಸಿ ಕೊಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ : ನನ್ನ ಕ್ಷೇತ್ರದ 10 ಡಿವಿಷನ್‌ಗಳು ಮಂಗಳೂರು ನಗರಪಾಲಿಕೆಯಲ್ಲಿ ಬರುತ್ತವೆ. ನಾನು ಶಾಸಕನಾಗಿ ಆಯ್ಕೆ ಆದ ನಂತರ ಅಲ್ಲಿ ನನಗೆ ಮುಕ್ತ ಪ್ರವೇಶ ಇತ್ತು. ಆದರೆ ಮೊನ್ನೆ ಮಂಗಳೂರು ನಗರ ಪಾಲಿಕೆಯ ಚುನಾವಣೆ ಆದ ನಂತರ ಮಂಗಳೂರು ನಗರ ಸಭೆಯ ಯಾವುದೇ ಸಭೆಯಲ್ಲಿ ಭಾಗವಹಿಸಲಿಕ್ಕೆ ನನಗೆ ಅವಕಾಶ ಇಲ್ಲ. ಏಕೆಂದರೆ ಮತದಾರರ ಪಟ್ಟಿಯಲ್ಲಿ ನಗರ ಇಲಾಖೆಯ ಪಟ್ಟಿಯಲ್ಲಿ ನನ್ನ ಹೆಸರು ನಮೂದಾಗಲಿಲ್ಲ. ಈಗ ಅನೇಕ ಎಂಎಲ್‌ಎ ಗಳಿಗೆ ಜಿಲ್ಲಾಪಂಚಾಯಿತಿಗಳಿಗೆ ಹೋಗಲಿಕ್ಕೆ ಅವಕಾಶಉಂಟು. ಆದರೆ ನನಗೆ ಆಡಳಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲಿಕ್ಕೆ ಅವಕಾಶ ಇಲ್ಲ. ನನ್ನ 10 ಡಿವಿಷನ್‌ಗಳಲ್ಲಿ ಮುಕ್ತವಾಗಿ ಕೆಲಸ ಮಾಡಲಿಕ್ಕೆ ತೊಂದರೆ ಆಗುತ್ತಿದೆ. ಇದರ ಬಗ್ಗೆ ನಾನು ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಹಾಗೂ ತಮ್ಮ ಹತ್ತಿರ ಅಧ್ಯಕ್ಷರೆ, ವಿನಂತಿ ಮಾಡಿಕೊಳ್ಳತ್ತಿದ್ದೇನೆ. ನಾನೇನೂ ಓಟಿಂಗ್‌ರೈಟ್ಸ್ ಕೇಳುತ್ತಿಲ್ಲಾ, ಆದರೆ ಜನರ ಸಮಸ್ಯೆಗಳನ್ನು ತೆಗದುಕೊಂಡು ಹೋಗಲಿಕ್ಕೆ ಕಷ್ಟವಾಗುತ್ತಿದೆ. ಆದುದರಿಂದ ತಾವು ಇದರ ಬಗ್ಗೆ ಶೀಘ್ರವಾಗಿ ವ್ಯವಸ್ಥೆ ಮಾಡಬೇಕು.

ಶ್ರೀ ಬಿ. ಎನ್. ಬಚ್ಚೇಗೌಡ : ಈಗಾಗಲೇ ಸಾಕಷ್ಟು ಕೆಲಸಗಳನ್ನು ಮಂಗಳೂರಿನಲ್ಲಿ ಕುಡಿಯುವ ನೀರಿನ ವಿಷಯವಾಗಿ ಮಾಡಿದ್ದೇವೆ. ಕುಡಿಯುವ ನೀರಿನ ವ್ಯವಸ್ಥೆಯನ್ನು ಸಾಕಷ್ಟು ಮಾಡಿದ್ದೇವೆ. ಈಗ ಅಡಿಷನಲ್ ತುಂಬೆಯಿಂದ ನೀರನ್ನು ಪಂಪ್ ಮಾಡಲಿಕ್ಕೆ 750 ಹೆಚ್.ಪಿ. ಪವರ್‌ಅನ್ನು ಹಾಕುತ್ತಿದ್ದೇವೆ.

ಅಧ್ಯಕ್ಷರು : ಅವರು ಈಗ ಹೇಳುವುದು ಏನು ಎಂದರೆ ಅವರ ಮತ ಕ್ಷೇತ್ರಕ್ಕೆ ಸೇರಿದಂತಹ 10 ಡಿವಿಷನ್‌ಗಳು ಮಂಗಳೂರು ಕಾರ್ಪೊರೇಷನ್ ವ್ಯಾಪ್ತಿಗೆ ಬರುತ್ತದೆ. ಕಾರ್ಪೊರೇಷನ್ ವ್ಯಾಪ್ತಿಯಲ್ಲಾಗಲೀ ಮತದಾರರ ಪಟ್ಟಿಯಲ್ಲಾಗಲೀ ಇವರ ಹೆಸರು ಇಲ್ಲ. ಚುನಾವಣೆ ಆಗುವ ಪೂರ್ವದಲ್ಲಿ ನಗರ ಸಭೆಯ ಎಲ್ಲಾ ಆಡಳಿತ ಸಭೆಗಳಿಗೆ ಇವರನ್ನು ಕರೆಯುತ್ತಿದ್ದರು, ಈಗ ಚುನಾವಣೆ ಆದ ನಂತರ ಅವರು ನಗರ ಸಭೆಗಳಿಗೆ ಇವರನ್ನು ಕರೆಯುತ್ತಿದ್ದರು, because he is not a voter in the Corporation limits. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸೀಮಿತವಾಗಿ ಆದರೂ ಅಲ್ಲಿ ಹೋಗಲಿಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಅವರು ಕೇಳುತ್ತಿದ್ದಾರೆ. ನಾನೇನೂ voting rights ಕೇಳುತ್ತಾ ಇಲ್ಲ ಎಂದು ಹೇಳುತ್ತಿದ್ದಾರೆ, I thing it is a valid point. You must examine.

ಶ್ರೀ ಬಿ. ಎನ್. ಬಚ್ಚೇಗೌಡ : ಇದರ ಬಗ್ಗೆ ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇವತ್ತು ಅರ್ಬನ್‌ನಲ್ಲಿ ಇರುವ ಎಂಎಲ್‌ಎ ಜಿಲ್ಲಾ ಪಂಚಾಯತ್ ಮೆಂಬರ್ ಆಗಬಹುದು. ಮುನಿಸಿಪಲ್ ಓಟರ್ ಆಗಿದ್ದರೆ ತಾಲ್ಲೂಕು ಪಂಚಾಯಿತಿಗೂ ಬರಬಹುದು. ಅದೇ ಹಳ್ಳಿಯಲ್ಲಿ ಇರುವವರು ಮುನಿಸಿಪಾಲಿಟಿಗೆ ಹೋಗಬಾರದು ಎಂಬುದು ಯಾವ ಶಾಸನ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಆ ಕ್ಷೇತ್ರದಲ್ಲಿ ಮುನಿಸಿಪಾಲಿಟಿಯಲ್ಲಿ ನನಗೆ ಮತ ಹಾಕಿರುತ್ತಾರೆ. ಆದರೆ ನಾನು ಇವತ್ತು ಮುನಿಸಿಪಾಲಿಟಿ ಸಭೆಗಳಿಗೆ ಮುಕ್ತವಾಗಿ ಹೋಗುವ ಹಾಗೆ ಇಲ್ಲ. ಅದೇ ಮುನಿಸಿಪಾಲಿಟಿನಲ್ಲಿ ಎಂಎಲ್‌ಎ ಬದುಕಿರುವ ಮನುಷ್ಯ ಆದರೆ ಅವರನ್ನು ಜಿಲ್ಲಾಪಂಚಾಯಿತ್‌ಗೆ ಏಕೆ ಕರೆಯುತ್ತೀರಿ, ತಾಲ್ಲೂಕು ಪಂಚಾಯಿತಿಗೆ ಏಕೆ ಕರೆಯುತ್ತೀರಿ ಎಂಬುದನ್ನು ತಾವು ಹೇಳಬೇಕು.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಈಗ ಜಿಲ್ಲಾ ಪಂಚಾಯತ್ ಸದಸ್ಯರು ನಗರಸಭೆಯನ್ನು ಪ್ರತಿನಿಧಿಸತಕ್ಕವರು, ಅವರು ಜಿಲ್ಲಾ ಪಂಚಾಯಿತಿಗೂ ಏಕೆ ಸದಸ್ಯರಾಗುತ್ತಾರೆ ಎಂದರೆ ರಾಜ್ಯಾಂಗದಲ್ಲಿ ಅವರು ಜಿಲ್ಲಾ ಪಂಚಾಯತ್ ಸದಸ್ಯರಾಗಿ ಇರಬೇಕು ಎನ್ನುವ ಮಾತನ್ನು ಅಳವಡಿಸಲಾಗಿದೆ.

ಶ್ರೀ ಜೆ. ಪಿ. ಮಾಧುಸ್ವಾಮಿ : ಹಾಗಿದ್ದರೆ ನೀವು ತಿದ್ದುಪಡಿ ಮಾಡಬೇಕು, ಆ ಮುನಿಸಿಪಾಲಿಟಿ ಏರಿಯಾದಲ್ಲಿ ನಮಗೆ ಓಟ್ ಹಾಕಿರುತ್ತಾರೆ, ಆ ಏರಿಯಾದಿಂದ ನಾವು ಹೊರಗೆ ಉಳಿಯುವಂತಾದರೆ, ನಾವು ಶಾಸಕರಾಗಿ ಏಕೆ ಇರಬೇಕು?

ಶ್ರೀ ಬಿ. ಎನ್. ಬಚ್ಚೇಗೌಡ : ಇದರ ಬಗ್ಗೆ ಎಕ್ಸಾಮಿನ್ ಮಾಡಿ ಹೇಳತ್ತೇನೆ.

ಅಧ್ಯಕ್ಷರು : ಸರಿ ಮುಂದಿನ ಪ್ರಶ್ನೆ.

ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೆ ಕೊಡಬೇಕಾಗಿರುವ ಸಹಾಯಧನ

285 - ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಮತ್ತು 1996-97ನೇ ಹಣಕಾಸು ವರ್ಷಗಳಲ್ಲಿ ರಾಜ್ಯ ಸರ್ಕಾರ ಬೇರೆ ಬೇರೆ ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೆ ಕೊಡಬೇಕಾಗಿರುವ ಸಹಾಯಧನ (ರಿಬೇಟ್) ಎಷ್ಟು ಹಾಗೂ ಕೊಡಲಾಗಿರುವ ಸಹಾಯಧನ ಎಷ್ಟು?*

ಆ) *ಸ್ವಾತಂತ್ರ್ಯ ಸಂಗ್ರಾಮದ ಸುವರ್ಣ ಮಹೋತ್ಸವ ಆಚರಿಸುವ ಈ ಐತಿಹಾಸಿಕ ವರ್ಷದಲ್ಲಿ ಯಾದರೂ ಇದೇ ಆಗಸ್ಟ್ 15 ರೊಳಗಾಗಿ ಬಾಕಿ ಉಳಿದಿರುವ ರಿಬೇಟ್ ಹಣ ಎಲ್ಲ ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೆ ನೀಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುವುದಕ್ಕೆ ಪರಿಶೀಲಿಸುವರೇ?*

ಇ) *ಹೆಚ್ಚುವರಿ ಜನರಿಗೆ ಉದ್ಯೋಗಾವಕಾಶ ಕಲ್ಪಿಸುವ, ಸದಾ ಹಣಕಾಸಿನ ತೊಂದರೆ ಅನುಭವಿಸುತ್ತಿರುವ ಈ ಖಾದಿ ಗ್ರಾಮೋದ್ಯೋಗ ಸಂಸ್ಥೆಗಳು ಇನ್ನು ಮುಂದೆಯೂ ರಿಬೇಟ್ ಹಣಕ್ಕಾಗಿ ಪರದಾಡುವ ಪರಿಸ್ಥಿತಿಯಿಂದ ಮುಕ್ತಗೊಳಿಸಲು ಅವಶ್ಯಕ ಕ್ರಮ ಕೈಗೊಂಡು ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಅರ್ಥಪೂರ್ಣವಾಗುವಂತೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು) :

ಅ) ಕೇಳಿರುವ ಮಾಹಿತಿ ಕೆಳಕಂಡಂತಿದೆ:

ಕೊಡಬೇಕಾದ ಮೊತ್ತ (ರೂ. ಲಕ್ಷಗಳಲ್ಲಿ)		ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)
1995-96	273.17	119.87
1996-97	458.27	395.01

ಆ) ಹೌದು.

ಇ) ಖಾದಿ ವಸ್ತುಗಳಿಗೆ ರಿಬೇಟ್ ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರವು ಮಂದುವರಿಸಿದ್ದೇ ಆದಲ್ಲಿ, ಸಕಾಲದಲ್ಲಿ ರಿಬೇಟ್ ನೀಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು.